## ಉತ್ತಮ ಸಂಚಿಕೆ

ಈ ವಾರದ ಸುಧಾ ಸಂಚಿಕೆಯಲ್ಲಿನ (ಫೆ. 18) ಅನೇಕ ಲೇಖನಗಳು ಉಪಯುಕ್ತವಾಗಿವೆ. ಸೌಮ್ಯಲಕ್ಷ್ಮಿ ಕುಕ್ಕಜೆ ಹಾಗೂ ಡಾ. ಶುಭ್ರತಾ ಅವರ ಲೇಖನಗಳು ಸಮಯೋಚಿತವಾಗಿವೆ. ಎಷ್ಟೋ ಬಾರಿ ಈ ರೀತಿಯ ಘಟನೆಗಳು ಕಾರ್ಪೇಟಿನಡಿಯಲ್ಲಿ ಮುಚ್ಚಿಹೋಗುತ್ತವೆ. ಬೇಲಿಯೇ ಎದ್ದು ಹೊಲ ಮೇಯ್ದಂತೆ ಎನ್ನುವ ಸ್ಥಿತಿ. ಬೇಲಿಗಳು ಬುದ್ಧಿ ಕಲಿಯುವಂಥ ಕಾನೂನು ಆದಷ್ಟು ಬೇಗನೆ ತಯಾರಾಗುವ ನಿರೀಕ್ಷೆ, ಭರವಸೆಯಲ್ಲಿ...

—ನಿರುಕ್ತಾ

ಸುಧಾ 18ರ ಸಂಚಿಕೆಯಲ್ಲಿ ಯು.ಎ. ಅವರು ಬರೆದಿರುವ ಕಿರುಲೇಖನ 'ಲಜ್ಜಾವತಿಯ ಔಷಧೀಯ ಗುಣ' ಮತ್ತು ಸೌಮ್ಯಲಕ್ಷ್ಮಿ ಕುಕ್ಕಜೆ ಅವರು ಬರೆದಿರುವ 'ಹೂಮನಸ್ಸಿನ ಮೇಲೆ ಮುಳ್ಳಿನ ಗೀರು' ಮತ್ತು ಶ್ರೀಗುರು ಅವರ 'ಅಳಿಲು ಪ್ರೀತಿಯು ಇಲ್ಲವಾಯಿತೆ?' – ಇವು ಅತ್ಯುತ್ತಮ ಚಿಂತನೆಯಿಂದ ಕೂಡಿದ ಬರಹಗಳು.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಡೋಂಗಿತನದ ಅನಾವರಣ

'ನಿಮ್ಮೊಡನೆ' ಪುಟದಲ್ಲಿ ಫೆ.18ರ ಸಂಚಿಕೆಯಲ್ಲಿ 'ಜನಪ್ರಿಯ ಮಾದರಿಗಳ ಭ್ರಮೆಯ ಬಲೂನಿಗೆ ತಾಗಿಸಬೇಕಿದೆ ಕಟು ವಾಸ್ತವದ ಸೂಜಿಮೊನೆ' ಲೇಖನದಲ್ಲಿ ರಘುನಾಥ ಚ. ಹ. ಅವರು ಆಟೋಟ ಮತ್ತು ಸಿನಿಮಾ ಐಕಾನ್‌ಗಳ ಡೋಂಗಿತನವನ್ನು ದಿಟ್ಟವಾಗಿ ಅನಾವರಣಗೊಳಿಸಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ ಯಾರೆಲ್ಲ ಮಾದರಿಯಾಗಬೇಕು, ಯಾರ ಜೀವನಸಾಧನೆ ಪ್ರೇರಣೆಯಾಗಬೇಕು ಎನ್ನುವದನ್ನು ಮನದಟ್ಟು ಮಾಡಿದ್ದಾರೆ. ಅನುಕರಣೀಯ ಲೇಖನ.



—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

'ನಿಮ್ಮೊಡನೆ'ಯಲ್ಲಿ ಹಂಚಿಕೊಂಡಿರುವ ಅಭಿಪ್ರಾಯಗಳು ನಿಜಕ್ಕೂ ಸಮಾಜದ ಒಳಗಣ್ಣನ್ನು ತೆರೆಸುವಂತಿವೆ. ಅತಿಯಾದ ಬೆಳಕು ಕಣ್ಣು ಕುಕ್ಕಿ ಅರೆಕ್ಷಣ ಅಂಧತ್ವ ತರುವಂತೆ ಕ್ರಿಕೆಟಿಗರು ಹಾಗೂ ಸಿನಿಮಾ ಕಲಾವಿದರಿಗೆ ಸಿಗುತ್ತಿರುವ ಅತಿ ಪ್ರಚಾರ ವಿವೇಕದ ಕಣ್ಣನ್ನು ಕುರುಡು ಮಾಡುತ್ತಿವೆ. ಇತರ ಎಲ್ಲಾ ವೃತ್ತಿಪರರಂತೆ ಇವರಿಗೂ ತಮ್ಮ ಕೆಲಸ ದುಡಿಮೆಯ ದಾರಿ ಎಂಬುದು ಮನವರಿಕೆಯಾದರೆ ಹಾಗೂ ಸಮಾಜವೂ ಅವರಿಗೆ ವಿಶೇಷ ಆಸಕ್ತಿ ತೋರದಿದ್ದರೆ ಒಳಿತು.

—ಟಿ.ಜಿ. ಆರ್.

## ಅಳಿಲುಪ್ರೀತಿ



ಶ್ರೀಗುರು ಅವರು 'ಅಳಿಲು ಪ್ರೀತಿಯೂ ಇಲ್ಲವಾಯಿತೇ?' (ಫೆ. 18) ಒಂದು ಅರ್ಥಪೂರ್ಣ ಲೇಖನ. ದೈತ್ಯ ಬೂದಳಲಿನ ಸಂತತಿ ಸಂಚಕಾರದಲ್ಲಿರುವ ಈ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯಯವರು ಲಕ್ಷ್ಯ ವಹಿಸಿ ಕ್ರಮ ಕೈಗೊಳ್ಳಬೇಕು.

—ಲಕ್ಷ್ಮಣ ರಾವ್ ಎಂ.ಎಲ್.,
ದಾವಣಗೆರೆ

## ಅಸಮಾಧಾನ ಹತ್ತಿಕ್ಕಬಹುದೇ?

ಫೆ. 18ರ ಸಂಚಿಕೆಯಲ್ಲಿ ಡಾ. ಪ್ರೇಮಲತ ಅವರು ಬರೆದಿರುವ 'ಅಸಮಾಧಾನ ಹತ್ತಿಕ್ಕುವುದು ಸಾಧ್ಯವೇ?' ಲೇಖನ ಅತ್ಯುತ್ತಮವಾಗಿದೆ. ನಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬಹುದಾದ ಹಲವು ಅಂಶಗಳನ್ನು ತುಂಬ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅಸಮಾಧಾನವೆಂಬುದು ನಮ್ಮೊಳಗಿನ ಬೆಂಕಿಯಿದ್ದಂತೆ. ಅದನ್ನು ಶಮನ ಮಾಡಿಕೊಳ್ಳದಿದ್ದರೆ ಅದು ನಮ್ಮನ್ನೇ ಸುಡುತ್ತದೆ.

—ಶಮಿತಾ ಶಾಸ್ತ್ರಿ, ಪರಮೇಶ್ವರ ಜಿ., ಬೆಂಗಳೂರು

## ಆಕರ್ಷಕ ಖೆಡ್ಡಾ

ಫೆ. 18ರ ಸಂಚಿಕೆಯಲ್ಲಿ ಸುಧೀಂದ್ರ ಪ್ರಸಾದ್ ಇ.ಎಸ್. ಬರೆದಿರುವ 'ಆಕರ್ಷಕ ಖೆಡ್ಡಾ' ಎಂಬ ಲೇಖನ ಓದಿದೆ. ಅಪರಾಧ ಜಗತ್ತಿನಲ್ಲಿ ಹೆಣ್ಣನ್ನು ಒಂದು ಸಲಕರಣೆಯಾಗಿ ಬಳಸಿಕೊಳ್ಳುವುದು ಹೊಸತೇನಲ್ಲ. ರಾಜಮಹಾರಾಜರ ಕಾಲದಿಂದಲೂ ಇದು ನಡೆದುಕೊಂಡು ಬಂದಿರುವುದೇ. ಅದು ಇಂದು ಹೊಸ ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಹೊಸ ರೂಪದಲ್ಲಿ ಜನರನ್ನು ಮೋಸಗೊಳಿಸುತ್ತಿದೆ ಅಷ್ಟೆ. ನಮ್ಮ ಮನಸ್ಸಿಗೆ ನೈತಿಕ ಬೇಲಿ ಹಾಕಿಕೊಂಡಿದ್ದರೆ ಇಂಥ 'ಅಡ್ಡಕಸುಬಿನ' ದಾರಿಗಳಲ್ಲಿ ಮುಗ್ಗರಿಸಿಬೀಳುವ ಅಪಾಯ ಇರುವುದಿಲ್ಲ.



## ಹೂ ಮನಸಿನ ಮೇಲೆ...



ಫೆ. 18ರ ಸಂಚಿಕೆಯಲ್ಲಿ ಪ್ರಕಟವಾದ ಸೌಮ್ಯಲಕ್ಷ್ಮಿ ಕುಕ್ಕಜೆ ಅವರ 'ಹೂ ಮನಸಿನ ಮೇಲೆ ಮುಳ್ಳಿನ ಗೀರು' ಲೇಖನ ಗಮನಾರ್ಹ. ಪೋಷಕರು ಮಕ್ಕಳಿಗೆ ಬಾಲ್ಯದಿಂದಲೇ ದೇಹದ ಕೆಲವು ಭಾಗಗಳನ್ನು ಬೇರೆಯವರು ಮುಟ್ಟದಂತೆ ತಡೆಯುವ ಬಗ್ಗೆ ತಿಳಿವಳಿಕೆ ನೀಡುವುದು ಅವಶ್ಯ. ಅಲ್ಲದೆ, ಎಷ್ಟೇ ಹತ್ತಿರದ ಸಂಬಂಧಿಯಾದರೂ, ಮಕ್ಕಳನ್ನು ಅವರ ಜೊತೆ ಮಲಗಲು ಬಿಡಬಾರದು. ಪ್ರೌಢಶಾಲೆಯಿಂದಲೇ ಮಕ್ಕಳಿಗೆ ಲೈಂಗಿಕ ಶಿಕ್ಷಣದ ಮೂಲಕ ಅರಿವು ಮೂಡಿಸುವುದು ತುಂಬಾ ಒಳ್ಳೆಯದು.

—ಬಾಣಾವರ ನಾಗರಾಜ, ಬೆಂಗಳೂರು

## ಹಳೆಯ ಕಥಾವಸ್ತು

ಫೆ. 11 ರ ಸಂಚಿಕೆಯಲ್ಲಿ ಪ್ರಕಟವಾದ ಬಿ. ಎಲ್. ವೇಣು ಅವರ 'ಉಗ್ರರು' ಕಥೆಯು ಹಳೆಯ ಕಥಾವಸ್ತುವನ್ನು ಹೊಂದಿದೆ. ಈ ಕಥೆಯು ಮರಾಠಿಯ 'ಸೈರಾಟ್', ತಮಿಳಿನ 'ಪಾವ ಕದೈಗಳ್' ಸಿನಿಮಾಗಳನ್ನು ಹೋಲುತ್ತದೆ. ಕಥೆಯ ನಿರೂಪಣೆ ಸಿನಿಮೀಯವಾಗಿದೆ.

—ಅಂಜನಾ ಕೆ.ಎಸ್.

## ಕ್ಯಾನ್ಸರ್ ಕುರಿತು ಅರಿವು

ಫೆ. 11ರ ಸಂಚಿಕೆಯಲ್ಲಿ ಉಮಾ ಅನಂತ್ ಅವರು ಬರೆದಿರುವ 'ಅರ್ಬುದ ತಾನೆಂಬ ವ್ಯಾಘ್ರನು' ಲೇಖನ ಅತ್ಯುತ್ತಮವಾಗಿದೆ. ಪ್ರಮುಖವಾಗಿ ಕ್ಯಾನ್ಸರ್ ಒಂದು ಸಾಧಾರಣ ಕಾಯಿಲೆ ಎಂದು ರೋಗಿಗಳಲ್ಲಿ ವಿಶ್ವಾಸ ತುಂಬಿ ಪ್ರೀತಿಯಿಂದ ಆರೈಕೆ ಮಾಡಿದಲ್ಲಿ ಬೇಗ ಗುಣವಾಗುತ್ತದೆ. ಕ್ಯಾನ್ಸರ್ ಗೆದ್ದು ಬಂದ ಗಾಯತ್ರಿಮೂರ್ತಿಯವರ ಬರಹ, ರೋಗದಿಂದ ಬಳಲುತ್ತಿರವರಿಗೆ ಧೈರ್ಯ ನೀಡುತ್ತದೆ.

—ಕಮಲಾದೇವಿ ಆರ್. ಹಳ್ಳೂರ್, ಬೆಂಗಳೂರು
—ನರೇಂದ್ರ ಎಂ., ಗುಜರಾತ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in